ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/ 52 /2024

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:22-07-2024.

**-:: ಸುತ್ತೋಲೆ ::-**

**ವಿಷಯ:-** 2024-25ನೇ ಶೈಕ್ಷಣಿಕ ಸಾಲಿನ ರಾಜ್ಯದ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಸೆಮಿಸ್ಟರ್ ಮತ್ತು ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ಆನ್‌ಲೈನ್ ಮೂಲಕ ನಡೆಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂ. ಇಡಿ 107 ಟಿಪಿಇ 1987, ದಿ:28-07-1987.
2. ಸರ್ಕಾರದ ಪತ್ರ ಸಂ. ಇಡಿ 56 ಡಿಟಿಇ 2024, ದಿ:29-04-2024.
3. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTEADMIO/ACM2/22/2024, ದಿ:07-05-2024 (ಅನುದಾನಿತ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ) ಹಾಗೂ ಈ ಕಛೇರಿ ಸಮಸಂಖ್ಯೆ ಸುತ್ತೋಲೆ ಪತ್ರ ದಿನಾಂಕ: 07.05.2024, 31.05.2024, 05.06.2024, 14.06.2024, 01.07.2024
4. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTEADMIO/ACM2/34/2024, ದಿ:07.06.2024 (ಅನುದಾನಿತ ಲ್ಯಾಟರಲ್ ಎಂಟ್ರಿ ತೃತೀಯ ಸೆಮಿಸ್ಟರ್ ಡಿಪ್ಲೋಮಾ).
5. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTE-ADMI0ACM2/23/2024, ದಿ:07-05-2024 (ಖಾಸಗಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ).
6. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTE-ADMI0ACM2/35/2024, ದಿ:07-06-2024 (ಖಾಸಗಿ ಲ್ಯಾಟರಲ್ ಎಂಟ್ರಿ ತೃತೀಯ ಸೆಮಿಸ್ಟರ್ ಡಿಪ್ಲೋಮಾ).

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3) ರಿಂದ (6)ರಲ್ಲಿನ ಪ್ರವೇಶಾಧಿಸೂಚನೆ ಪತ್ರಗಳಲ್ಲಿ ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಡಿಪ್ಲೋಮಾ ಪ್ರವೇಶಕ್ಕಾಗಿ ಚಾಲ್ತಿಯಲ್ಲಿರುವ ವಿವಿಧ ನಿಯಮಗಳು ಮತ್ತು ಸರ್ಕಾರಿ ಆದೇಶಗಳಲ್ಲಿ ಸೂಚಿಸಿರುವ ಅಂಶಗಳನ್ನು ಸ್ಪಷ್ಟವಾಗಿ ಗಮನದಲ್ಲಿರಿಸಿಕೊಂಡು ಪ್ರವೇಶ ಮಾಡಿಕೊಳ್ಳಬೇಕೆಂದು ಸಂಸ್ಥೆಯ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿತ್ತು ಈ ಪ್ರಕಾರ ಈಗಾಗಲೇ ಪ್ರಸಕ್ತ ಸಾಲಿನ ಪ್ರವೇಶ ಪ್ರಕ್ರಿಯೆಗಳು ಪ್ರಗತಿಯ ಹಂತದಲ್ಲಿರುತ್ತವೆ.

ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಅನುಮತಿಸಿರುವಂತೆ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 02 ವಿಧಾನಗಳ ಆನ್‌ಲೈನ್ ಹಾಗೂ ಆಫ್-ಲೈನ್ ಮೂಲಕ ಸೀಟು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಮತ್ತು ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ. ಅದೇ ರೀತಿಯಾಗಿ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ನಿಯಮಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

2024-25ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಮಾಡಿಕೊಂಡಂತಹ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯನ್ನು ತಾಂತ್ರಿಕ ಶಿಕ್ಷಣ ಆಯುಕ್ತಾಲಯವು ಆನ್‌ಲೈನ್ ಮೂಲಕ ನಡೆಸಲು ಯೋಜಿಸಲಾಗಿದೆ. ಅದರಂತೆ. ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿದ ದಾಖಲಾತಿಗಳನ್ನು ಆನ್‌ಲೈನ್ ಮುಖಾಂತರ ಪರಿಶೀಲಿಸಲಾಗುವುದು.

ರಾಜ್ಯದ ಎಲ್ಲಾ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಉಪನ್ಯಾಸಕರ/ಸಿಬ್ಬಂದಿಯವರ ತಂಡವನ್ನು ರಚಿಸಿಕೊಂಡು ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಅಡಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಅಗತ್ಯ ಎಲ್ಲಾ ಮೂಲ ದಾಖಲಾತಿಗಳ ಪ್ರಮಾಣ ಪತ್ರಗಳನ್ನು ನಿಯಮಾನುಸಾರ ಪರಿಶೀಲಿಸಿ ತದನಂತರ ಆನ್‌ಲೈನ್ ಮೂಲಕ ವೆಬ್ ಪೋರ್ಟ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿದೆ. ತಂಡದವರು ಪರಿಶೀಲಿಸಿ ಅಪ್‌ಲೋಡ್ ಮಾಡಿದ ದಾಖಲಾತಿಗಳ ಆಧಾರದ ಮೇಲೆ ಪ್ರವೇಶಾನುಮೋದನೆಯನ್ನು ನೀಡಲಾಗುತ್ತದೆ. ಆದುದರಿಂದ ಪ್ರವೇಶ ನೀಡಲಾದ ದಾಖಲಾತಿಗಳಲ್ಲಿ ನ್ಯಾಯಾಲಯ ಪ್ರಕರಣ ಮತ್ತು ಸಾರ್ವಜನಿಕರು ಕೋರುವ ಪೂರ್ಣ ಮಾಹಿತಿಯನ್ನು ಆಯಾ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರೇ ನೀಡಬೇಕೆಂಬ ಷರತ್ತುಗೊಳಿಪಟ್ಟು ವಿದ್ಯಾರ್ಥಿಗಳ ದಾಖಲೆಗಳ ಕುರಿತು ಮುಂದೆ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಪ್ರಾಂಶುಪಾಲರು ಹಾಗೂ ತಂಡದವರೇ ನೇರ **ಹೊಣೆಗಾರರಾಗಿರುತ್ತಾರೆ.**

ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಮೂಲಕ 3ನೇ ಸೆಮಿಸ್ಟರ್/2ನೇ ವರ್ಷದ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಮಾಡಿಕೊಂಡಂತಹ ಅಭ್ಯರ್ಥಿಗಳ ಈ ಕೆಳಕಂಡ ದಾಖಲಾತಿಗಳನ್ನು ದೃಡೀಕರಿಸಿ ಸ್ಕ್ಯಾನ್ ಮಾಡಿ https://dtetech.karnataka.gov.in/dteone/emp/Login.aspx ಲಿಂಕ್ ಉಪಯೋಗಿಸಿಕೊಂಡು **ದಿ:22-07-2024 ರಿಂದ 03-08-2024**ರ ವರೆಗೆ ಅಪ್-ಲೋಡ್ ಮಾಡುವುದು. ಈ ಕೆಳಗೆ ವಿವರಿಸುವಂತೆ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಪರಿಶೀಲನೆಯನ್ನು ನಡೆಸಲಾಗುವುದು.

- **ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ**
- **ಎಸ್.ಎಸ್.ಎಲ್.ಸಿ / ಐ.ಟಿ.ಐ / ಪಿಯುಸಿ(ವಿಜ್ಞಾನ/ತಾಂತ್ರಿಕ ವಿಷಯಗಳು) ಮೂಲ ಅಂಕಪಟ್ಟಿ**
- **Admission Allotment Order (ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ಮಾತ್ರ)**
- **ವರ್ಗಾವಣೆ ಪ್ರಮಾಣ ಪತ್ರ(TC) / ಆಕ್ಷೇಪಣಾ ರಹಿತ ಪ್ರಮಾಣ ಪತ್ರ (NOC) (ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆಯಿಂದ ಮಾತ್ರ ಧೃಡೀಕೃತ)**
- **ಪ.ಜಾ / ಪ.ಪಂ / ಪ್ರವರ್ಗ-1 ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿರ ಅಡಿಯಲ್ಲಿ ಪ್ರವೇಶ ಪಡೆದವರ ಜಾತಿ ಮತ್ತು ಆದಾಯ ವರಮಾನ ಪ್ರಮಾಣ ಪತ್ರ**
- **ಕನ್ನಡ ಮಾಧ್ಯಮ/ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ**
- **ಕರ್ನಾಟಕದಲ್ಲಿ 05 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರ (ಸಂಬಂಧಿಸಿದ ಬಿ.ಇ.ಓ ಗಳಿಂದ ಮೇಲು ರುಜು ಮಾಡಿಸಿರಬೇಕು)**
- **ಕಲ್ಯಾಣ - ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರ**
- 5(2) ನಿಯಮ ವಿಶೇಷ ಗುಂಪಿನ ಮೀಸಲಾತಿ (Special Category Quota) ಕೋಟಾದ ಪ್ರಮಾಣ ಪತ್ರ
- **Physical Fitness Certificate (ಸೂಕ್ತ ವೈಧ್ಯಾಧಿಕಾರಿಗಳಿಂದ)**

- ಅರ್ಹತಾ ಪ್ರಮಾಣ ಪತ್ರದ ಪ್ರತಿ (ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಲ್ಪಡುವ ಎಸ್.ಎಸ್.ಎಲ್.ಸಿ ಯಾಗಿಲ್ಲದ ಎಲ್ಲಾ ಅಭ್ಯರ್ಥಿಗಳಿಗೂ ಅನ್ವಯಿಸುವಂತೆ)\
- ಮೂಲ ವಲಸೆ ಪ್ರಮಾಣ ಪತ್ರ (ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ), ವಿದೇಶಿ ವಿದ್ಯಾರ್ಥಿಗಳಿಗೆ ನಿಗಧಿಪಡಿಸಲಾದ ಅನುಮತಿ ಪತ್ರದ ಮೂಲ ಪ್ರಮಾಣ ಪತ್ರ.
- ದಾನಿಗಳ ಕೋಟಾದಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರಿಂದ ಮೊದಲೇ ಅನುಮೋದನೆ ಪಡೆದಿರಬೇಕು. ಹಾಗೂ ಇದಕ್ಕೆ ಸಂಬಂಧಿಸಿದ ದಾಖಲೆಯ ಜೆರಾಕ್ಸ್ ಪ್ರತಿ (ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ).
- ರಿಪೀಟರ್ ಕೋಟಾದಲ್ಲಿ ಪ್ರಥಮ ಸೆಮಿಸ್ಟರ್‌ಗೆ ಮಾತ್ರ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಸಂಬಂಧಿಸಿದ ಹಿಂದಿನ ವರ್ಷದ ಪ್ರವೇಶಾನುಮೋದನೆಯ ಜೆರಾಕ್ಸ್ ಪ್ರತಿ.
- ಅರ್ಹತಾ ಪ್ರಮಾಣ ಪತ್ರಕ್ಕಾಗಿ ಖಜಾನೆ-2 ಮುಖಾಂತರ ತಾಂತ್ರಿಕ ಪರೀಕ್ಷಾ ಮಂಡಳಿಯ ಲೆಕ್ಕ ಶೀರ್ಷಿಕೆಗೆ ಪಾವತಿಸಿರುವ ಮೂಲ ಚಲನ್ ಅಥವಾ ಸಮೀಪದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪಾವತಿಸಿರುವ ರಶೀದಿ ಪ್ರತಿ.

ತದನಂತರ ಅಭ್ಯರ್ಥಿಗಳ ಅನುಮೋದನಾ ಪಟ್ಟಿಗಳನ್ನು ಡೌನ್‌ಲೋಡ್ ಮಾಡಿಕೊಂಡು, ಪ್ರವೇಶಾನುಮೋದನೆಯ ಪಟ್ಟಿಯಲ್ಲಿನ ವಿದ್ಯಾರ್ಥಿಯ ಭಾವಚಿತ್ರದ ಮೇಲೆ ಪ್ರಿನ್ಸಿಪಾಲರ ಸಹಿ ಹಾಗೂ ಸಂಸ್ಥೆಯ ಮೊಹರುನೊಂದಿಗೆ ಧೃಡೀಕರಿಸಿ, ಪ್ರತಿ ಕೋರ್ಸಿನ ಕೊನೆಯಲ್ಲಿ ಸಂಸ್ಥೆಯ ಮೊಹರುನೊಂದಿಗೆ ಸಹಿಯನ್ನು ಮಾಡತಕ್ಕದ್ದು. ತಂಡದವರು ಪರಿಶೀಲಿಸಿದ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಸಂಸ್ಥೆಯ ಪ್ರಾಂಶುಪಾಲರು ದೃಡೀಕರಿಸಿ ಪ್ರವೇಶಾನುಮೋದನಾ ಪಟ್ಟಿಯ ತ್ರಿಪ್ರತಿಯೊಂದಿಗೆ ಆಯುಕ್ತಾಲಯಕ್ಕೆ ಸಲ್ಲಿಸುವುದು.

ಅನುಮೋದನೆ ಪಡೆದ ಒಂದು ಪ್ರತಿಯನ್ನು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಇದಲ್ಲದೆ ಅನರ್ಹ ಅಭ್ಯರ್ಥಿಗಳು ನಿಗಧಿತ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶ ಹಾಗೂ ಪ್ರವೇಶಕ್ಕೆ ಅಂತಿಮ ದಿನಾಂಕ ಮುಗಿದ ನಂತರ ಪ್ರವೇಶ ಮಾಡಿಕೊಂಡಿದ್ದಲ್ಲಿ ಯಾವುದೇ ಕಾರಣಕ್ಕೂ ಅಂತಹ ಅಭ್ಯರ್ಥಿಗಳ ಪ್ರವೇಶವನ್ನು ಅನುಮೋದಿಸಲಾಗುವುದಿಲ್ಲ. ಹಾಗೂ ಅಂತಹವರು ತಾಂತ್ರಿಕ ಪರೀಕ್ಷಾ ಮಂಡಳಿಯ ಯಾವುದೇ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲ ಎಂದು ತಿಳಿಸಲಾಗಿದೆ.

ಇಲಾಖೆಯ ನಿಯಮ, ನಿರ್ದೇಶನ ಸೂಚನೆಗಳನ್ನು ಅನುಸರಿಸದೆ ಪ್ರವೇಶ ನೀಡಿದ್ದಲ್ಲಿ, ಮುಂದೆ ಉದ್ಭವಿಸುವ ಯಾವುದೇ ವಿಧವಾದ ಸಮಸ್ಯೆಗಳಿಗೆ ಸಂಸ್ಥೆಯ ಪ್ರಿನ್ಸಿಪಾಲರು/ಮುಖ್ಯಸ್ಥರುಗಳೇ ಪೂರ್ಣ ಜವಾಬ್ದಾರರಾಗುತ್ತಾರೆ ಎಂದು ತಿಳಿಸಲಾಗಿದೆ. ಸೆಮಿಸ್ಟರ್ ಪದ್ಧತಿ ಜಾರಿಗೆ ಬಂದಿರುವ ಕಾರಣದಿಂದ ಪೂರ್ಣ ಪ್ರಮಾಣದ ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗಾಗಿ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡದಿದ್ದಲ್ಲಿ, ಸೆಮಿಸ್ಟರ್ ಪರೀಕ್ಷೆಗೆ ಅನುಮತಿ ನೀಡಲಾಗುವುದಿಲ್ಲವೆಂಬ ಎಚ್ಚರಿಕೆಯನ್ನು ನೀಡಲಾಗಿದೆ. ಪ್ರವೇಶಾನುಮೋದನೆಯ ಯಾವುದೇ ಮಾಹಿತಿ/ವಿವರಗಳು ಬೇಕಾಗಿದ್ದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಎಸಿಎಂ ವಿಭಾಗದ ಅಧಿಕಾರಿಗಳನ್ನು/ಸಿಬ್ಬಂದಿಯವರನ್ನು ಸಂಪರ್ಕಿಸಬಹುದು.

ಸಂಬಂಧಪಟ್ಟ ಪ್ರಿನ್ಸಿಪಾಲರುಗಳು ಮೇಲಿನ ದಿನಾಂಕಗಳೊಳಗೆ ಪ್ರವೇಶಾತಿ ನೀಡಲಾದ ವಿದ್ಯಾರ್ಥಿಗಳ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅವರುಗಳೇ ಮುಂದಿನ ಆಗುಹೋಗುಗಳಿಗೆ ನೇರವಾಗಿ ಹೊಣೆಗಾರರಾಗಬೇಕಾಗುತ್ತದೆ. ಎಂದು ಈ ಮೂಲಕ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ **https://dtek.karnataka.gov.in/** ವೆಬ್‌ಸೈಟ್‌ನ್ನು ಆಗಿಂದಾಗ್ಗೆ ಪ್ರತಿನಿತ್ಯ ವೀಕ್ಷಿಸಿ ಮಾಹಿತಿಯನ್ನು ಪಡೆಯತಕ್ಕದ್ದು.

"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ,**

**ರಾಜ್ಯದಲ್ಲಿರುವ ಎಲ್ಲಾ ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ.**

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು (ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು – ಸಂಸ್ಥೆಗಳ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳಿಗೆ ಪ್ರವೇಶಾನುಮೋದನೆ ನೀಡಿದವರಿಗೆ ಮಾತ್ರ ಪರೀಕ್ಷಾ ಪ್ರವೇಶ ಪತ್ರಗಳನ್ನು ನೀಡಲು ಕೋರಿದೆ.
5. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಆಡಳಿತ ವಿಭಾಗಕ್ಕೆ - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.
7. ಕಛೇರಿ ಪ್ರತಿ.